# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನೋಂದಾಯಿತ ನಿಗಮ ಕಛೇರಿ ವಿಳಾಸ :
ನಂ.29 ನಿಗಮ ಕಾರ್ಯಾಲಯ,
ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-570017.
Email: www.cescmysore.org
CIN:U40109KA2004SGC035177

C.E.S.C, MYSORE

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ) ರವರ ಕಛೇರಿ
ಕಾ ಮತ್ತು ಪಾ ಉಪವಿಭಾಗ,
ಗಂಡಸಿ -573119
ಫೋನ್: 08174-220138
ಇ-ಮೇಲ್ : aeegnd@gmail.com


ಸಂಖ್ಯೆ :-ಸ.ಕಾ.ನಿ.ಇಂ/ಗಂಡಸಿ/18-19/ 1353-55 ದಿನಾಂಕ: 14.11.18

## ಸಭಾ ನಡಾವಳಿ

ದಿನಾಂಕ:02.11-2018 ರಂದು ಬೆಳಿಗ್ಗೆ 11 ಗಂಟೆಗೆ ಅಧೀಕ್ಷಕ ಇಂಜನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ, ಹಾಸನ ರವರ ಅಧ್ಯಕ್ಷತೆಯಲ್ಲಿ ಗಂಡಸಿ ಉಪ-ವಿಭಾಗದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

ಸಭಾಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಮತ್ತು ಸಾರ್ವಜನಿಕರನ್ನು ಸ್ವಾಗತಿಸಿ ಸಭೆಯನ್ನು ಬೆಳಿಗ್ಗೆ: 11:00 ಗಂಟೆಗೆ ಪ್ರಾರಂಭಿಸಿದರು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:

1. ಶ್ರೀ ಸುಚೇತನ ಬಿ.ಎಸ್. ಮಾನ್ಯ ಅಧೀಕ್ಷಕ ಇಂಜನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ, ಹಾಸನ.
2. ಶ್ರೀ ಸೋಮಶೇಖರ್‌ಗೌಡ ಜಿ. ಮಾನ್ಯ ಕಾರ್ಯಪಾಲಕ ಇಂಜನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ ಚಾ.ವಿ.ಸ.ನಿ.ನಿ. ಅರಸೀಕೆರೆ
3. ಶ್ರೀ ಪ್ರದೀಪ್‌ಕುಮಾರ್. ಆರ್. ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ಉಪವಿಭಾಗ ಚಾ.ವಿ.ಸ.ನಿ.ನಿ. ಗಂಡಸಿ.
4. ಶ್ರೀ ರಘುನಂದನ್ ಹೆಚ್.ಪಿ. ಸಹಾಯಕ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ. ಗಂಡಸಿ ಶಾಖೆ, ಗಂಡಸಿ ಉಪ-ವಿಭಾಗ.
5. ಶ್ರೀ ಪುನಿತ್. ಆರ್.ಎನ್. ಕಿರಿಯ ಇಂಜಿನಿಯರ್(ವಿ), ಚಾ.ವಿ.ಸ.ನಿ.ನಿ. ಬಾಗೇಶಪುರ ಶಾಖೆ, ಗಂಡಸಿ ಉಪ-ವಿಭಾಗ.

ಮೊದಲಿಗೆ ಹಿಂದಿನ ಸಭೆಯಲ್ಲಿ ದಾಖಲಾದ ಅರ್ಜಿಗಳ ಬಗ್ಗೆ ಹಾಗೂ ತೆಗೆದುಕೊಂಡ ಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಈ ಸಭೆಯಲ್ಲಿ ದಾಖಲಾದ ಕೆಳಕಂಡ ದೂರುಗಳ ವಿವರಗಳು

| ಕ್ರ.ಸಂ | ಅರ್ಜಿದಾರರ ವಿಳಾಸ | ದೂರವಾಣಿ ಸಂಖ್ಯೆ | ಗ್ರಾಮ | ದೂರು | ಸಮುಜಾಯಿಷಿ ಉತ್ತರ |
|---|---|---|---|---|---|
| 1. | ಶ್ರೀ ದೊರೆಸ್ವಾಮಿ. ಮಂಜೇನಹಳ್ಳಿ | 9731848497 | ಗಂಡಸಿ | ಶ್ರೀ ದೊರೆಸ್ವಾಮಿ ರವರು ಗಂಡಸಿ ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ದಿವಗಂತ ಶ್ರೀ. ಭರತ್ ಕಿರಿಯ ಮಾರ್ಗದಾಳು ರವರ ಅಣ್ಣ ಶ್ರೀ ದಿವಾಕರ್ ರವರಿಗೆ ಅನುಕಂಪದ ಆಧಾರದ ಮೇಲೆ ನಿಗಮದಲ್ಲಿ ಕೆಲಸ ನೀಡಲು ಅರ್ಜಿ ಸಲ್ಲಿಸಿದ್ದು ಮತ್ತು ಗುಂಪು ವಿಮಾ ಪಾಲಿಸಿಯಿಂದ ಬರಬಹುದಾದ ಪರಿಹಾರಕ್ಕೆ ಸಂಬಂದಿಸಿದಂತೆ ಮಾಹಿತಿಯನ್ನು ಕೋರಿರುತ್ತಾರೆ. | ಮಾನ್ಯ ಅಧೀಕ್ಷಕ ಇಂಜನಿಯರ್(ವಿ) ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ, ಹಾಸನ ರವರು, ಶ್ರೀ ದಿವಾಕರ್ ರವರ ನೌಕರಿಗೆ ಸಂಬಂದಿಸಿದ ಅರ್ಜಿಯ ನ್ಯೂನತೆಗಳನ್ನು ಸರಿಪಡಿಸಿ ಸಲ್ಲಿಸಿದಲ್ಲಿ ಶೀಘ್ರವಾಗಿ ನೇಮಕಾತಿ ಆದೇಶ ಹೊರೆಡಿಸುವುದಾಗಿ ತಿಳಿಸಿರುತ್ತಾರೆ ಮತ್ತು ಗುಂಪು ವಿಮಾ ಪಾಲಿಸಿಯ ಪರಿಹಾರ ವಿಳಂಬಕ್ಕೆ ಪತ್ರ ಮುಖೇನ ವ್ಯವಹರಿಸುವುದಾಗಿ ತಿಳಿಸಿರುತ್ತಾರೆ. |

ಕ್ರ.ಸಂ 2092
ಕಾ 22-11-18
ಹಾಸನ

| | | | | | |
|---|---|---|---|---|---|
| 2. | ಶ್ರೀ ಹರೀಶ್. ಮಹಾದೇವರಹಳ್ಳಿ | 8151849159 | ಮಹಾದೇವರಹಳ್ಳಿ | ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಕೊಳವೆಬಾವಿಗೆ ಹಣ ಪಾವತಿಸಿ ಅಂದಾಜು ಪಟ್ಟಿಯನ್ನು ಸಲ್ಲಿಸಿ ಸುಮಾರು 8 ತಿಂಗಳು ಕಳೆದಿದ್ದರೂ ಸಹ ಪರಿವರ್ತಕವನ್ನು ಅಳವಡಿಸಲಾಗಿರುವುದಿಲ್ಲ ಎಂದು ಮತ್ತು ತುರ್ತಾಗಿ ಕಾಮಗಾರಿಯನ್ನು ಮಾಡಿಸಿಕೊಡಬೇಕೆಂದು ಕೋರಿರುತ್ತಾರೆ. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ, ಹಾಸನ ರವರು, ಅಕ್ರಮ ಸಕ್ರಮ ಯೋಜನೆಯು ಟೆಂಡರ್ ಹಂತದಲ್ಲಿದ್ದು, ಪ್ರಕ್ರೀಯೆಯು ಪೂರ್ಣಗೊಂಡ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ತಿಳಿಸಿರುತ್ತಾರೆ. |
| 3. | ಶ್ರೀ ಶಿವಣ್ಣಗೌಡ, ಶಿವಪುರ | 9071284879 | ಶಿವಪುರ | ಶಿವಪುರ ಗ್ರಾಮದ ಹತ್ತಿರ DDUGJY ಕಾಮಗಾರಿಯು ಪ್ರಗತಿಯಲ್ಲಿದ್ದು, ಕಾಮಗಾರಿಯ ಸಂದರ್ಭದಲ್ಲಿ ತಮ್ಮ ಮನೆಗೆ ಸಂಪರ್ಕ ಕಲ್ಪಿಸುವ ವಿದ್ಯುತ್ ಮಾರ್ಗದ ಸಂಪರ್ಕವನ್ನು ಕಡಿತಗೊಳಿಸಲಾಗಿದ್ದು ವಿದ್ಯುತ್ ಇಲ್ಲದೇ ತೊಂದರೆಯಾಗಿರುವುದಾಗಿ ತಿಳಿಸಿರುತ್ತಾರೆ. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ, ಹಾಸನ ರವರು ಶಾಖಾಧಿಕಾರಿಗಳು ಗಂಡಸಿರವರಿಗೆ ತುರ್ತಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಬೇಕೆಂದು ಸೂಚಿಸಿರುತ್ತಾರೆ. |
| 4. | ಶ್ರೀ ಗಂಗಾಧರ. ಅಧ್ಯಕ್ಷರು ಗಂಡಸಿ ಗ್ರಾಮ ಪಂಚಾಯತಿ | – | ಗಂಡಸಿ | ಗಂಡಸಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ 4 ಹಳ್ಳಿಗಳ ಹಾಳಾದ ಬೀದಿ ದೀಪಗಳನ್ನು ಬದಲಾಯಿಸಲು ಗ್ರಾಮ ಪಂಚಾಯತಿಗೆ ಸಹಕರಿಸುವಂತೆ ಕೋರಿರುತ್ತಾರೆ. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ, ಹಾಸನ ರವರು ಶಾಖಾಧಿಕಾರಿಗಳು ಗಂಡಸಿ ರವರಿಗೆ ಗ್ರಾಮ ಪಂಚಾಯತಿಯ ವಿದ್ಯುತ್ ಸಮಸ್ಯೆಗಳಿಗೆ ಸಹಕರಿಸುವಂತೆ ಸೂಚಿಸಿರುತ್ತಾರೆ. |
| 5. | ಶ್ರೀ ಧರಣೇಶ್ ಗುಂಡಾಕ್ಕನಹಳ್ಳಿ | 8197213479 | ಗುಂಡಾಕ್ಕನಹಳ್ಳಿ | ಶ್ರೀ ಧರಣೇಶ್ ರವರ ಮನೆಯ ಹತ್ತಿರವಿರುವ ವಿದ್ಯುತ್ ಕಂಬವು ಹಾಳಾಗಿದ್ದು ಸದರಿ ಕಂಬವನ್ನು ತುರ್ತಾಗಿ ಬದಲಾಯಿಸಿಕೊಡಲು ಕೋರಿರುತ್ತಾರೆ. | ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ, ಹಾಸನ ರವರು ಶಾಖಾಧಿಕಾರಿಗಳು ಗಂಡಸಿ ರವರಿಗೆ ಕೂಡಲೇ ಒಂದು ದಿನದ ಗಡುವು ನೀಡಿ ಕಂಬವನ್ನು ಬದಲಾಯಿಸಲು ಸೂಚಿಸಿರುತ್ತಾರೆ |

ಜನ ಸಂಪರ್ಕ ಸಭೆಯಲ್ಲಿ ಶಾಖಾಧಿಕಾರಿಗೊಳೊಂದಿಗೆ ಶಾಖಾ ಮಟ್ಟದ ಅಭಿವೃದ್ಧಿ ಕೆಲಸಗಳ ಬಗ್ಗೆ ಚರ್ಚಿಸಲಾಯಿತು. ಸಭೆಯನ್ನು ಮಧ್ಯಾಹ್ನ 1.00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

Pradeep R 14/11/18

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಸೆಸ್ಕ್, ಗಂಡಸಿ ಉಪ–ವಿಭಾಗ,
ಗಂಡಸಿ.

**ಪ್ರತಿಗಳು:**

1. ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಸಂತೆ ಪೇಟೆ, ಬಿ.ಎಂ. ರಸ್ತೆ ಹಾಸನ ರವರ ಆದ್ಯ ಅವಗಾಹನೆಗಾಗಿ ಸಲ್ಲಿಸಲಾಗಿದೆ..
2. ಮಾನ್ಯ ಕಾರ್ಯಪಾಲಕ ಇಂಜಿನಿಯರ್(ವಿ) ಕಾ ಮತ್ತು ಪಾ ವಿಭಾಗ ಚಾ.ವಿ.ಸ.ನಿ.ನಿ. ಅರಸೀಕೆರೆ. ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ..
3. ಶಾಖಾಧಿಕಾರಿಗಳು, ಗಂಡಸಿ/ಬಾಗೇಶಪುರ ರವರ ಮಾಹಿತಿಗಾಗಿ.
4. ಕಛೇರಿ ಪ್ರತಿ.

ಅ ಇಂ(ವಿ) ಚಾವಿಸನಿನಿ
ವೃತ್ತ ಕಛೇರಿ, ಹಾಸನ
ಕಾ.ನಿ.ಇಂ.(ಕ)
ಉ.ಲೆ.ನಿ
ಸ.ಕ.ನಿ.ಇಂ.(ಕ)
ಸ.ಕಾ.ನಿ.ಇಂ.(ಸಿವಿಲ್)
ಸ.ಇಂ.(ವಿ)
ಕಿ.ಇಂ.(ವಿ)
ಸ.ಲೆ
ಓ.ಆ.ಸೆ
ಮು.ಗು.